ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಸ್ವತಂತ್ರವಾದ ಘಟಕವನ್ನಾಗಿ ಇಡಲಿಕ್ಕೆ ನಿರ್ಣಯಂ ಕೈಗೊಂಡಿದೆ. ಈ ವಿಚಾರ ಸರ್ಕಾರದ ಮುಂದೆ ಇಲ್ಲ. ಪರಿಶೀಲನೆ ಮಾಡುವುದಕ್ಕೆ ಬಂದಾಗ ಪರಿಶೀಲನೆ ಮಾಡಿ ಇದನ್ನು ಸ್ವತಂತ್ರ ಘಟಕವನ್ನಾಗಿ ಇಡಲಿಕ್ಕೆ ನಿರ್ಣಯ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಎನ್.ಜಿ.ಇ.ಎಫ್. ಎನ್.ಇ.ಐ. ಕವಿಕ, ಹಳೆಯ ಗವರ್ನ್‌ಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ ವಿದ್ಯುಚ್ಛಕ್ತಿಯ ಉಪಕರಣಗಳನ್ನು ತಯಾರು ಮಾಡುವಂಥ ಕಾರ್ಖಾನೆಗಳಾಗಿರುವುದರಿಂದ ಒಂದು ರೀತಿಯಾಗಿ ಬೇರೆ ಬೇರೆ ರೇಂಜಸ್ ಇರುವುದರಿಂದ ಅವೆಲ್ಲವೂ ಸೇರಿ ಒಂದು ರೀತಿಯಾದ ಕೈಗಾರಿಕೆಯನ್ನು ಮಾಡಿ ಬೆಳೆಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಕಾರ್ಖಾನೆಗಳ ಕೆಲಸ ಒಂದು ರೀತಿಯಾಗಿ ಹೊಂದಾಣಿಕೆಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅವರು ತಯಾರು ಮಾಡತಕ್ಕ ವಸ್ತುಗಳನ್ನು ಇವರು ಮಾಡ ಕೂಡದು. ಆದುದರಿಂದ ಇದು ಬೆಳವಣಿಗೆಯಾಗುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಶ್ನೆ ಕನ್ನಡದಲ್ಲಿ ಮುದ್ರಣವಾಗಿರುವುದರಲ್ಲಿ "ಅಸ್ಪಷ್ಟ ಕೈಗಾರಿಕೆಗಳು" ಎಂದಂ ಇದೆ. ಸಿಕ್ ಅಂದರೆ ಅಸ್ಪಷ್ಟ ಅಲ್ಲ ಅಸ್ವಸ್ಥ. ಕೈಗಾರಿಕೆಯ ಸ್ಪಷ್ಟತೆಯನ್ನು ಕೊನೆಗಾಣಿಸಿದ್ದಾರೆ, ಆದಕ್ಕೋಸ್ಕರ ಅಸ್ಪಷ್ಟ ಎಂದು ಇದೆ. ಸರಕಾರಿ ವಲಯದ ಅಸ್ವಸ್ಥ ಕೈಗಾರಿಗಳಂ ಎಂದಂ ಇರಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೌದಂ.

ಸಭಾಪತಿಯವರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಉತ್ತರಗಳನ್ನು ಸಭೆಯ ಮುಂದೆ ಇಡುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಲಿಖಿತ ಉತ್ತರಗಳನ್ನು ಈ ಸಭೆಯ ಮುಂದೆ ಇಡುತ್ತೇನೆ.

ಗುಳೇದಗುಡ್ಡ ಮತಕ್ಷೇತ್ರದ ಹುನಗುಂದ ತಾಲ್ಲೂಕಿನ ಕ್ಯಾದಿಗೇರಿ ಜಿಲಾಪುರ ಗ್ರಾಮಗಳ ನಡುವೆ ಇರುವ ಹಳ್ಳಕ್ಕೆ ಸೇತುವೆ ಕಟ್ಟುವ ಕುರಿತಂ

೨೩. ವಲ್ಲಿಕಾರ್ಜುನ ಬಿನ್ನಿ (ಗುಳೇದಗುಡ್ಡ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಳೇದಗುಡ್ಡ ಕ್ಷೇತ್ರದ ಹುನಗುಂದ ತಾಲ್ಲೂಕಿನ ಕ್ಯಾದಿಗೇರಿ ಜಿಲಾಪುರ ಗ್ರಾಮಂಗಳ ನಡುವೆ ಇರುವ ಹಳ್ಳಕ್ಕೆ ಸೇತುವೆ ಕಟ್ಟುವ ವಿಚಾರ ಸರಕಾರದವರ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಅದರ ವಿವರಗಳೇನಂ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅರಣ್ಯ ಸಂಪತ್ತನ್ನು ಗುತ್ತಿಗೆ ನೀಡಿರುವುದಂ

೧೦೦. ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮರಗಳನ್ನು ಕಡಿಯಲು ಗುತ್ತಿಗೆ ಪಡೆದಿರುವ ಸಂಸ್ಥೆಗಳಾವುವು ಹಾಗೂ ನಿಗದಿ ಪಡಿಸಿರುವ ಬೆಲೆ ಏನು ಮತ್ತು ಎಷ್ಟು ವರ್ಷಗಳಂ ಗುತ್ತಿಗೆಗೆ ಕೊಡಲ್ಪಟ್ಟಿರುತ್ತದೆ ?

ಆ) ಹಾಲಿ ನಿಗದಿಪಡಿಸಿರುವ ಗುತ್ತಿಗೆಯ ಅವಧಿ ಹಾಗೂ ಕಡಿಮೆ ಬೆಲೆಯಿಂದ ಸರ್ಕಾರದವರ ಬೊಕ್ಕಸಕ್ಕೆ ಕೋಟಿ ಗಟ್ಟಲೆ ಹಣ ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?